◆ **ಮೊದಲೆರಡು ಸೀಸನ್‌ಗಳನ್ನು ನೀವೇ ನಡೆಸಿಕೊಟ್ಟಿದ್ದಿರಿ. ಆ ಕಾರ್ಯಕ್ರಮಗಳ ಅನುಭವ ಹೇಗಿತ್ತು?**

ತುಂಬ ಜನರು, ತುಂಬ ಘಟನೆಗಳು ನೆನಪಿನಲ್ಲಿವೆ. ಒಬ್ಬ ಸ್ಪರ್ಧಿ ಕೋಟಿ ಗೆದ್ದಿದ್ದ. ಅವನ ಸಂಭ್ರಮ ಮಾತ್ರ ನನಗೆ ಮರೆಯಲು ಸಾಧ್ಯವಿಲ್ಲ. ಇಲ್ಲಿ ಬರುವ ಸ್ಪರ್ಧಿಗಳಲ್ಲಿ ಬಹಳಷ್ಟು ಜನರು ಅವರ ಬದುಕಿನ ಕಥೆಯನ್ನು ಹಂಚಿಕೊಳ್ಳುತ್ತಾರೆ. ನಾವು ನೋಡಲು, ಕೇಳಲು ಸಿಗದ ಕತೆಗಳೆಲ್ಲ ಇಲ್ಲಿ ಸಿಗುತ್ತವೆ. ಆದರೆ ಇಲ್ಲಿಗೆ ಬಂದ ಯಾರೂ ನೋವಿನಲ್ಲಿ ಹೋಗಬಾರದು ಎಂಬುದು ನನ್ನ ಆಸೆ. ಬದುಕು ಹೇಗೆ ಇರುತ್ತದೆಯೋ ಹಾಗೆಯೇ ಬದುಕುವುದು ಅನಿವಾರ್ಯ. ಆದರೆ ಕೆಲವೊಮ್ಮೆ ನಮಗೆ ಬರುವ ಅವಕಾಶಗಳನ್ನು ಚೆನ್ನಾಗಿ ಬಳಸಿಕೊಳ್ಳಬೇಕು. ಬದುಕಿನಲ್ಲಿ ಸಾಕಷ್ಟು ಅವಕಾಶ ಬರುತ್ತದೆ. ಅವನ್ನು ಬಳಸಿಕೊಳ್ಳಿ ಎಂದು ಹೇಳಿ ಕಳಿಸುತ್ತೇನೆ. ಇಲ್ಲಿರುವಷ್ಟು ಹೊತ್ತು ಉಳಿದೆಲ್ಲವನ್ನೂ ಮರೆತು ಖುಷಿ ಖುಷಿಯಾಗಿ ಇರಿಸಲು ಪ್ರಯತ್ನಿಸುತ್ತೇನೆ. ಅವರ ಊರು, ಉದ್ಯೋಗದ ಬಗ್ಗೆ ವಿಚಾರಿಸುತ್ತೇನೆ. ಅಷ್ಟು ಮಾತ್ರ ನನ್ನಿಂದ ಸಾಧ್ಯವಾಗುವುದು.

ಎಷ್ಟೋ ಜನ ರಾಜ್ಯದ ಯಾವ್ಯಾವುದೋ ಭಾಗಗಳಿಂದ ಬಂದಿರುತ್ತಾರೆ. ಅವರು ನೋಡಲಿಕ್ಕೂ ಚೆನ್ನಾಗಿರುತ್ತಾರೆ. ಬುದ್ಧಿವಂತಾಗಿರುತ್ತಾರೆ. ಖುಷಿ ಖುಷಿಯಾಗಿರುತ್ತಾರೆ. ಅವರ ಪ್ರತಿಭೆಯನ್ನು ಸಾಬೀತುಗೊಳಿಸಲಿಕ್ಕೆ ಅವಕಾಶ ಸಿಕ್ಕಿರುವುದಿಲ್ಲ. ಕೆಲವರಿಗಾದರೂ ಅಂಥ ಅವಕಾಶವನ್ನು ಈ ಕಾರ್ಯಕ್ರಮದ ಮೂಲಕ ನೀಡುತ್ತಿದ್ದೇವೆ. ಅಂಥವರಿಂದ ನಾನು ಸಾಕಷ್ಟು ಸಲ ಪ್ರೇರಿತನಾಗಿದ್ದೇನೆ.

◆ **ಈ ಶೋಗೆ ಮಾನಸಿಕವಾಗಿ ನೀವು ಹೇಗೆ ಸಿದ್ಧರಾಗುತ್ತೀರಿ?**

ಮನಸ್ಸನ್ನು ಪೂರ್ತಿ ಖಾಲಿಯಾಗಿರಿಸಿಕೊಂಡೇ ಈ ಕಾರ್ಯಕ್ರಮದ ಹೋಸ್ಟ್ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತೇನೆ. ನನ್ನ ಎದುರಿಗೆ ಆಡಲು ಕೂತ ಸ್ಪರ್ಧಿಗಳನ್ನು ನನ್ನದೇ ಆದ ರೀತಿಯಲ್ಲಿ ವಿಶ್ಲೇಷಿಸುತ್ತೇನೆ. ನನಗೇ ಎಲ್ಲವೂ ತಿಳಿದಿದೆ ಎಂದಲ್ಲ. ಬರುವ ಪ್ರಶ್ನೆಗಳು ಹೇಗಿರುತ್ತವೆ, ಅವಕ್ಕೆ ಉತ್ತರಗಳು ಏನಿರಬಹುದು ಎಂಬ ಕುತೂಹಲ ನನಗೂ ಇರುತ್ತದೆ. ಸಾಮಾನ್ಯವಾಗಿ ಏಳು ಎಂಟು ಪ್ರಶ್ನೆಗಳ ನಂತರ ಆಟ ಗಂಭೀರ ಸ್ವರೂಪ ಪಡೆದುಕೊಳ್ಳುತ್ತದೆ. ಸ್ಪರ್ಧಿಗಳು ಸಾಧ್ಯವಾದಷ್ಟೂ ಹಣ ಗೆದ್ದುಕೊಂಡು ಹೋಗಲಿ ಎಂಬುದು ನನ್ನ ಆಸೆಯೂ ಆಗಿರುತ್ತದೆ.

◆ **ಪಿಆರ್‌ಕೆ ನಿರ್ಮಾಣ ಸಂಸ್ಥೆಯ ಕೆಲಸ ಹೇಗೆ ನಡೆಯುತ್ತಿದೆ?**

‘ಕವಲು ದಾರಿ’ ಈ ವರ್ಷ ಬಿಡುಗಡೆಯಾಯ್ತು. ಅದು ಒಳ್ಳೆಯ ಗಳಿಕೆಯನ್ನೂ ತಂದುಕೊಟ್ಟಿತು. ಹೇಮಂತ್ ಮತ್ತು ಅವರ ತಂಡಕ್ಕೆ ನಾನು ಕೃತಜ್ಞನಾಗಿದ್ದೇನೆ. ಯಾಕೆಂದರೆ ಪಿಆರ್‌ಕೆ ಪ್ರೊಡಕ್ಷನ್‌ನಲ್ಲಿ ಮೊದಲನೇ ಸಿನಿಮಾ ಕಮರ್ಷಿಯಲ್ ಆಗಿ ಗೆದ್ದಿರುವುದು ತುಂಬ ಸಂತೋಷ ಮತ್ತು ಧೈರ್ಯ ಕೊಟ್ಟಿದೆ. ಆ ಸಿನಿಮಾದ ತಮಿಳು ರೀಮೇಕ್ ಹಕ್ಕುಗಳು ಒಳ್ಳೆಯ ಬೆಲೆಗೆ ಮಾರಾಟ ಆಯ್ತು. ಮಲಯಾಳಂ, ತೆಲುಗು ಭಾಷೆಗಳಲ್ಲಿಯೂ ಮಾತುಕತೆ ನಡೆಯುತ್ತಿದೆ. ಹಿಂದಿಯಲ್ಲಿಯೂ ಕವಲುದಾರಿ ಆಗುವ ಸಾಧ್ಯತೆ ಇದೆ. ‘ಲಾ’ ಮತ್ತು ‘ಮಾಯಾಬಜಾರ್’ ಸಿನಿಮಾಗಳೂ ಇದೇ ವರ್ಷ ಬಿಡುಗಡೆಯಾಗುತ್ತಿವೆ. ಇನ್ನೊಂದು ಚಿತ್ರ, ಅದಕ್ಕಿನ್ನೂ ಹೆಸರಿಟ್ಟಿಲ್ಲ. ಅದೂ ಇದೇ ವರ್ಷ ಬಿಡುಗಡೆ ಮಾಡಬೇಕು ಎಂಬ ಯೋಚನೆ ಇದೆ. ಹೊಸ ತರಹದ ಸಿನಿಮಾಗಳನ್ನು ಇನ್ನಷ್ಟು ಮಾಡುವ ಆಲೋಚನೆ ಇದ್ದೇ ಇದೆ.

◆ **ಒಬ್ಬ ನಟನಾಗಿ ತುಂಬ ಎಚ್ಚರಿಕೆಯಿಂದ ಸಿನಿಮಾ ಆಯ್ಕೆ ಮಾಡಿಕೊಳ್ಳುವಿರಿ. ಹಾಗೆಯೇ ನಿರ್ಮಾಪಕನಾಗಿ ಹಣ ಹೂಡುವಾಗ ನೀವು ಯಾವ ಅಂಶಗಳನ್ನು ಗಮನದಲ್ಲಿ ಇಟ್ಟುಕೊಳ್ಳುತ್ತೀರಿ?**

ನಿರ್ದಿಷ್ಟ ಮಾನದಂಡ ಅಂತೇನೂ ಇಟ್ಟುಕೊಂಡಿಲ್ಲ. ಯಾವುದೋ ಹೊಸ ತಂಡ ಬಂದು ಭೇಟಿಯಾಗುತ್ತದೆ. ಅವರೊಂದು ಕಾನ್ಸೆಪ್ಟ್ ಹೇಳುತ್ತಾರೆ. ಅವರದ್ದೇ ಆದ ಮೇಕಿಂಗ್ ಸ್ಟೈಲ್ ಇರುತ್ತದೆ. ಈಗ ನಾವು ನಿರ್ಮಾಣ ಮಾಡುತ್ತಿರುವುದು ತೀರಾ ರೆಗ್ಯುಲರ್ ಕಮರ್ಷಿಯಲ್ ಸಿನಿಮಾ ಅಲ್ಲದಿರಬಹುದು; ಇವೊಂಥರ ಬ್ರಿಡ್ಜ್ ಸಿನಿಮಾಗಳು. ಇಂದಿನ ಡಿಜಿಟಲ್ ಪ್ಲಾಟ್‌ಫಾರಂ ಕೂಡ ಹೊಸ ಅವಕಾಶಗಳನ್ನು ತೆರೆದಿಟ್ಟಿದೆ.

◆ **ನಿಮ್ಮ ನಿರ್ಮಾಣ ಸಂಸ್ಥೆಯಲ್ಲಿ ಮುಂದೆಯೂ ಇಂಥದ್ದೇ ಸಿನಿಮಾಗಳು ಬರುತ್ತವೆಯೇ?**

ಜನರಿಗೆ ಆಸಕ್ತಿ ಹುಟ್ಟಿಸುವ, ಖುಷಿ ಕೊಡುವ ಸಿನಿಮಾಗಳನ್ನು ನಿರ್ಮಾಣ ಮಾಡಬೇಕು ಎಂಬುದಷ್ಟೇ ನಮ್ಮ ಗಮನದಲ್ಲಿದೆ.

◆ **ಒಳ್ಳೆಯ ಕಥೆ ಸಿದ್ಧ ಮಾಡಿಟ್ಟುಕೊಂಡ ತುಂಬ ಜನ ಹೊಸಬರಿಗೆ ನಿಮ್ಮನ್ನು ಸಂಪರ್ಕಿಸಲು ಸಾಧ್ಯವೇ ಆಗುವುದಿಲ್ಲ ಎಂಬ ಮಾತೂ ಇದೆಯಲ್ಲ.**

ನಾನಿದನ್ನು ತುಂಬ ಕಂಫರ್ಟಬಲ್ ಆಗಿ ಹೇಳ್ತೇನೆ. ಅವರು ನನ್ನನ್ನು ಕಥೆ ಇಟ್ಟುಕೊಂಡು ಸಂಪರ್ಕಿಸುವುದು ಬೇಡ. ಅವರ ಕೆಲಸದ ಜೊತೆ ಭೇಟಿಯಾಗಲಿ. ಈಗ ತುಂಬ ಈಸಿ, ಮೊಬೈಲ್‌ನಲ್ಲಿ ಬೇಕಾದರೂ ಶೂಟ್ ಮಾಡಿಬಿಡಬಹುದು. ಅದರಲ್ಲೇ ನೀವು ಎಡಿಟ್ ಕೂಡ ಮಾಡಿಬಿಡಬಹುದು. ಡೈಲಾಗ್ ಬರೀಬೋದು. ಅಂಥದ್ದೊಂದು ಪ್ರಾಜೆಕ್ಟ್ ಸಿದ್ಧಮಾಡಿಕೊಂಡು ಸಂಪರ್ಕಿಸಿ. ಅದನ್ನು ನಾವು ನೋಡಿ, ವಿಶ್ಲೇಷಿಸಿ ಇಷ್ಟವಾದರೆ ನಿರ್ಮಾಣ ಮಾಡುತ್ತೇವೆ. ಇಲ್ಲವಾದರೆ ಇಲ್ಲ. ಹೊಸಬರು, ಅವರಿಗೆ ಅವಕಾಶ ಕೊಡಬೇಕು ಎಂಬೆಲ್ಲ ವಿನಾಯಿತಿ ಖಂಡಿತ ಇಲ್ಲ. ಅವರ ಕೆಲಸ ನಮಗೆ ಥ್ರಿಲ್ ಆಗಬೇಕು. ಅದನ್ನು ಬಿಟ್ಟು ಬೇರೆ ಯಾವ ಶಾರ್ಟ್‌ಕಟ್ ಇಲ್ಲ. ‘ಮಾಯಾಬಜಾರ್’ ಸಿನಿಮಾ ನಿರ್ದೇಶಕರನ್ನು ನಾವು ಆಯ್ಕೆ ಮಾಡಿದ್ದು ಯೂಟ್ಯೂಬ್‌ನಲ್ಲಿ ಅವರು ಮಾಡಿದ ಶಾರ್ಟ್‌ಫಿಲಂ ನೋಡಿ.

◆ **ನಿರ್ಮಾಣ ಮಾಡುತ್ತಿದ್ದೀರಿ. ಪಿಆರ್‌ಕೆ ಆಡಿಯೊ ಕಂಪನಿಯನ್ನೂ ಆರಂಭಿಸಿದ್ದೀರಿ. ಸಿನಿಮಾ ವಿತರಣೆಗೂ ಇಳಿಯುವ ಆಲೋಚನೆ ಇದೆಯಾ?**

ದೇವರ ದಯೆಯಿಂದ ಅದನ್ನೂ ಆರಂಭಿಸಬೇಕು ಅಂದುಕೊಂಡಿದ್ದೇವೆ. ನೋಡೋಣ.

◆ **ನೀವು, ಶಿವರಾಜ್‌ಕುಮಾರ್ ಮತ್ತು ರಾಘವೇಂದ್ರ ರಾಜ್‌ಕುಮಾರ್ ಸೇರಿ ಒಂದು ಸಿನಿಮಾ ಮಾಡುತ್ತೀರಿ ಎಂಬ ಸುದ್ದಿ ಇದೆಯಲ್ಲ?**

ಮಾಡಬೇಕೆಂಬ ಆಸೆ ನಮಗೂ ಇದೆ. ಕಥೆ ಸಿಗಬೇಕಲ್ಲ. ಸೂಕ್ತವಾದ ಕಥೆ ಸಿಗ್ತಾನೇ ಇಲ್ಲ. ಸಿಕ್ಕಿದರೆ ಖಂಡಿತ ಮಾಡುತ್ತೇವೆ. ■



ಚಿತ್ರಕೃಪೆ: ಕೆ.ಎನ್. ನಾಗೇಶ್‌ಕುಮಾರ್